**ಕರ್ನಾಟಕ ವಿಧಾನ ಪರಿಷತ್**

**140ನೇ ಅಧಿವೇಶನ**

| | | |
|---|---|---|
| ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ | : | 627 |
| ಸದಸ್ಯರ ಹೆಸರು | : | ಶ್ರೀ ಘೋಟ್ನೇಕರ್ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 11-03-2020 |
| ಉತ್ತರಿಸುವ ಸಚಿವರು | : | ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಸಚಿವರು |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಕಾರವಾರ ಜಿಲ್ಲೆಯ ಹಳಿಯಾಳ ತಾಲ್ಲೂಕಿನ ಹಳಿಯಾಳದಿಂದ ತಾಟವಾಳ ತನಕ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ರಸ್ತೆಗಳು ಹಾಳಾಗಿದ್ದು, ಸಾರ್ವಜನಿಕ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹಳಿಯಾಳ ತಾಲೂಕಿನ ಹಳಿಯಾಳ ಲೋಕೋಪಯೋಗಿ ಉಪ-ವಿಭಾಗ ವ್ಯಾಪ್ತಿಯಲ್ಲಿ ಬರುವ ಹಳಿಯಾಳದಿಂದ ತಾಟವಾಳ ಗಡಿಯವರೆಗಿನ ರಸ್ತೆಯು ಪ್ರಸಕ್ತ ಸಾಲಿನಲ್ಲಿ ಉಂಟಾದ ಅತೀವೃಷ್ಠಿಯಿಂದ ಹಾಳಾಗಿದ್ದು, ಸದರಿ ರಸ್ತೆಯಲ್ಲಿ ಉಂಟಾಗಿದ್ದ ಗುಂಡಿಗಳನ್ನು ಡಾಂಬರು ಮಿಶ್ರಿತ ಜೆಲ್ಲಿಯಿಂದ ದುರಸ್ಥಿ ಪಡಿಸಿ ಸಾರ್ವಜನಿಕ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ. |
| ಆ) | ಸದರಿ ಹಾಳಾಗಿರುವ ರಸ್ತೆ ರಿಪೇರಿ ಕಾರ್ಯಕ್ಕೆ ಎಷ್ಟು ಅನುದಾನ ಮಂಜೂರಾಗಿರುತ್ತದೆ; (ಸವಿಸ್ತಾರ ವರದಿ ನೀಡುವುದು) | ಸದರಿ ರಸ್ತೆಯ ದುರಸ್ತಿ ಕಾಮಗಾರಿಗೆ 2019-20ನೇ ಸಾಲಿನಲ್ಲಿ ಒದಗಿಸಿದ ಅನುದಾನದ ವಿವರ ಕೆಳಕಂಡಂತಿದೆ.<br><br>1) ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲೂಕಿನ ಖಾನಾಪೂರ ತಾಳಗುಪ್ಪ ರಾಜ್ಯ ಹೆದ್ದಾರಿ-93 ರ ಕಿ.ಮೀ 39.67 ದಿಂದ 46.00, ಕಿಮೀ. 49.35 ರಿಂದ 52.00 ಹಾಗೂ ಕಿಮೀ. 55.00 ರಿಂದ 81.85 ರ ವರೆಗೆ ರಸ್ತೆಯ ಮುಂಗಾರು ಪೂರ್ವ ಹಾಗೂ ಮುಂಗಾರು ನಂತರದ ನಿರ್ವಹಣೆಗೆ ರೂ.46.40 ಲಕ್ಷ ಅನುದಾನ ಮಂಜೂರಾಗಿದೆ. (ಹಳಿಯಾಳದಿಂದ ತಾಟವಾಳ ಗಡಿಯವರೆಗೆ ಕಿ.ಮೀ 50.00 ರಿಂದ 81.85 ರ ವರೆಗೆ ಬರುತ್ತದೆ.)<br><br>2) ಹಳಿಯಾಳ ತಾಲೂಕಿನ ಖಾನಾಪೂರ ತಾಳಗುಪ್ಪ ರಾಜ್ಯ ಹೆದ್ದಾರಿ-93 ಕಿ.ಮೀ 46.00 ದಿಂದ 49.50, ಕಿ.ಮೀ 52.00 ದಿಂದ 55.00 ಹಾಗೂ ಕಿಮೀ. 59.50 ದಿಂದ 60.50 ರ ವರೆಗೆ ಸುಧಾರಣೆ ಮಾಡುವ ಕಾಮಗಾರಿಗೆ ರೂ.500.00 ಲಕ್ಷ ಅನುದಾನ ಮಂಜೂರಾಗಿರುತ್ತದೆ.<br><br>3) ಹಳಿಯಾಳ ತಾಲೂಕಿನ ಖಾನಾಪೂರ ತಾಳಗುಪ್ಪ ರಾಜ್ಯ ಹೆದ್ದಾರಿ-93 ಕಿ.ಮೀ 55.00 ರಲ್ಲಿ ಸರ್ಕಲ್ (ಕೆಸರೊಳ್ಳಿ) ಸುಧಾರಣೆ ರೂ.5.00 ಲಕ್ಷ ಅನುದಾನ ಮಂಜೂರಾಗಿರುತ್ತದೆ. |
| ಇ) | ಸದರಿ ರಸ್ತೆ ಕಾಮಗಾರಿ ಕುರಿತು ಟೆಂಡರ್ ಕರೆಯಲಾಗಿದೆಯೇ; (ವಿವರ ನೀಡುವುದು) | ಮೇಲ್ಕಾಣಿಸಿದ ಎಲ್ಲ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಗುತ್ತಿಗೆ ನಿಗದಿಪಡಿಸಲಾಗಿದೆ. |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಈ) | ಸದರಿ ರಸ್ತೆ ಕಾಮಗಾರಿ ಟೆಂಡರ್‌ನ್ನು ಯಾವ ಗುತ್ತಿಗೆದಾರ ಪಡೆದುಕೊಂಡಿರುತ್ತಾರೆ; ಹಾಗೂ ಸದರಿಯವರು ರಸ್ತೆ ಕಾಮಗಾರಿ ಎಂದಿನಿಂದ ಪ್ರಾರಂಭ ಮಾಡುತ್ತಾರೆ; ಪ್ರಾರಂಭ ಮಾಡಿದ್ದಲ್ಲಿ, ಯಾವಾಗ ಕಾಮಗಾರಿ ಮುಗಿಯುತ್ತದೆ; ಸದರಿ ಗುತ್ತಿಗೆದಾರರಿಗೆ ಅನುದಾನ ಬಟವಾಡೆ ಮಾಡಿರುತ್ತಾರೆಯೇ? (ಸವಿಸ್ತಾರ ವರದಿ ನೀಡುವುದು) | 1) ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲೂಕಿನ ಖಾನಾಪೂರ ತಾಳಗುಪ್ಪ ರಾಜ್ಯ ಹೆದ್ದಾರಿ-93 ಕಿ.ಮೀ 39.67 ದಿಂದ 46.00, ಕಿಮೀ. 49.35 ರಿಂದ 52.00 ಹಾಗೂ ಕಿಮೀ 55.00 ರಿಂದ 81.85 ರ ವರೆಗೆ ರಸ್ತೆಯ ಮುಂಗಾರು ಪೂರ್ವ ಹಾಗೂ ಮುಂಗಾರು ನಂತರದ ನಿರ್ವಹಣೆಗೆ ರೂ. 46.40 ಲಕ್ಷ. ಮಂಜೂರಾಗಿದ್ದು, ಶ್ರೀ ಬಿ.ಎನ್. ಕಾಮ್ರೇಕರ ಗುತ್ತಿಗೆದಾರರು, ಹಳಿಯಾಳ ಇವರಿಗೆ ರೂ.34.24 ಲಕ್ಷ ಮೊತ್ತಕ್ಕೆ ಟೆಂಡರ್ ಆಧಾರದಲ್ಲಿ ವಹಿಸಿಕೊಡಲಾಗಿದೆ. ಸದರಿ ರಸ್ತೆಯ ಕಾಮಗಾರಿಯನ್ನು ದಿನಾಂಕ:7.11.2019 ರಂದು ಪ್ರಾರಂಭಿಸಿ ದಿನಾಂಕ: 8.2.2020ಕ್ಕೆ ಕಾಮಗಾರಿ ಮುಕ್ತಾಯಗೊಳಿಸಲಾಗಿದೆ. ಸದರಿ ಗುತ್ತಿಗೆದಾರರಿಗೆ ರೂ. 31.49 ಲಕ್ಷ ಪಾವತಿಸಲಾಗಿದೆ.<br><br>2) ಹಳಿಯಾಳ ತಾಲೂಕಿನ ಖಾನಾಪೂರ ತಾಳಗುಪ್ಪ ರಾಜ್ಯ ಹೆದ್ದಾರಿ-93 ಕಿ.ಮೀ 46.00 ದಿಂದ 49.50, ಕಿ.ಮೀ 52.00 ದಿಂದ 55.00 ಹಾಗೂ ಕಿಮೀ. 59.50 ದಿಂದ 60.50 ರ ವರೆಗೆ ಸುಧಾರಣೆ ಕಾಮಗಾರಿಗೆ ರೂ. 500.00 ಲಕ್ಷ ಮಂಜೂರಾಗಿದ್ದು, ಶ್ರೀ ಎಸ್.ಎಸ್. ಪೋಲಿಸ ಪಾಟೀಲ & ಕಂಪನಿ ಗುತ್ತಿಗೆದಾರರು ಹುಬ್ಬಳ್ಳಿ ಇವರಿಗೆ ರೂ.424.66 ಲಕ್ಷ ಮೊತ್ತಕ್ಕೆ ಟೆಂಡರ್ ಆಧಾರದಲ್ಲಿ ವಹಿಸಿಕೊಡಲಾಗಿದೆ. ದಿನಾಂಕ:6.2.2020 ರಂದು ಕಾಮಗಾರಿಯನ್ನು ಪ್ರಾರಂಭಿಸಿ ಇಲ್ಲಿಯವರೆಗೆ ಕಿ.ಮೀ 52.49 ದಿಂದ 55.465 ರವರೆಗಿನ ಡಾಂಬರೀಕರಣ ಕೆಲಸವನ್ನು ಪೂರ್ಣಗೊಳಿಸಲಾಗಿದೆ. (ಹಳಿಯಾಳದಿಂದ ಕೆಸರೊಳ್ಳಿರವರೆಗಿನ ರಸ್ತೆ ಭಾಗ). ಸದರಿ ಕಾಮಗಾರಿಯ ರೂ.177.88 ಲಕ್ಷ ಮೊತ್ತದ ಬಿಲ್ಲು ಸ್ವೀಕೃತವಾಗಿದ್ದು, ಪಾವತಿಸಲು ಕ್ರಮವಹಿಸಲಾಗುವುದು.<br><br>3) ಹಳಿಯಾಳ ತಾಲೂಕಿನ ಖಾನಾಪೂರ ತಾಳಗುಪ್ಪ ರಾಜ್ಯ ಹೆದ್ದಾರಿ-93 ಕಿ.ಮೀ 55.00 ರಲ್ಲಿ ದುರಸ್ಥಿ ಕಾಮಗಾರಿಯನ್ನು ರೂ.5.00 ಲಕ್ಷ ಮೊತ್ತಕ್ಕೆ ಶ್ರೀ ಬಿ.ಎನ್.ಕಾಮ್ರೇಕರ, ಹಳಿಯಾಳರವರಿಗೆ ವಹಿಸಿಕೊಡಲಾಗಿದೆ. ಕಾಮಗಾರಿಯನ್ನು ದಿನಾಂಕಃ 3.2.2020 ರಂದು ವಹಿಸಿಕೊಡಲಾಗಿದ್ದು ದಿನಾಂಕ 29.2.2020 ರಂದು ಕಾಮಗಾರಿಯನ್ನು ಪೂರ್ಣಗೊಂಡಿದ್ದು, ಬಿಲ್ಲು ಪಾವತಿಸಬೇಕಾಗಿರುತ್ತದೆ. |

ಲೋಇ/264/ಐಎಫ್ಎ/2020

(ಗೋವಿಂದ ಎಂ ಕಾರಜೋಳ)
ಮಾನ್ಯ ಉಪಮುಖ್ಯಮಂತ್ರಿಗಳು
ಹಾಗೂ ಲೋಕೋಪಯೋಗಿ ಸಚಿವರು